(ಸಾಕ್ಷಿದಾರರನ್ನು ಇಂದುಃ 11-12-2019 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಬಿ.ಎಸ್. ವಕೀಲರಿಂದಃ**

ನಾನು ಮೆಡಿಕಲ್ ಪ್ರ್ಯಾಕ್ಟಿಷ್ನರ್ ಆಗಿದ್ದೇನೆ ಎಂದರೆ ಸರಿ. ನಾನು 40 ವರ್ಷಗಳಿಂದ ಖಾಸಗಿ ವೈದ್ಯರಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಪ್ರತಿ ದಿನ 500 ರಿಂದ 600 ರೂ. ಆದಾಯ ಇರುತ್ತದೆ. ನನಗೆ ಪ್ರತಿ ತಿಂಗಳು 15 ರಿಂದ 20 ಸಾವಿರ ಆದಾಯ ಇದೆ ಎಂದರೆ ಸರಿ. ಪ್ರತಿ ತಿಂಗಳು ಖರ್ಚು ಕಳೆದು ಎಷ್ಟು ಉಳಿಯುತ್ತದೆ ಎಂದರೆ ಸಾಕ್ಷಿ 15,000-00 ಉಳಿಯುತ್ತದೆ ಎಂದಿದ್ದಾರೆ. 40 ವರ್ಷದಿಂದ ತಿಂಗಳ ಆದಾಯ ಒಂದೇ ರೀತಿ ಇದೆಯೇ ಅಥವಾ ಹೆಚ್ಚಿಗೆ ಆಗಿದೆಯೇ ಎಂದರೆ ಸಾಕ್ಷಿ 40 ವರ್ಷದಿಂದ ತಿಂಗಳ ಆದಾಯ 20,000-00 ಇದೆ ಎಂದಿದ್ದಾರೆ. ಆದಾಯದ ತೇರಿಗೆಯಲ್ಲಿ ತೋರಿಸಿದ್ದೀರಾ ಎಂದರೆ ಸಾಕ್ಷಿ ತೋರಿಸಿದ್ದೇನೆ ಎಂದಿದ್ದಾರೆ. ಆದಾಯ ತೇರಿಗೆಯಲ್ಲಿ ಕ್ರಯದ ಕರಾರು ಪತ್ರದ ಬಗ್ಗೆ ತೋರಿಸಿದ್ದೀರಾ ಎಂದರೆ ಸಾಕ್ಷಿ ತೋರಿಸಿಲ್ಲ ಎಂದಿದ್ದಾರೆ. ಯಾವ ಕಾರಣಕ್ಕೆ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ಕ್ರಯಪತ್ರ ಆಗಿಲ್ಲದೆ ಇರುವುದರಿಂದ ತೋರಿಸಿರುವುದಿಲ್ಲ ಎಂದಿದ್ದಾರೆ.

ಪಿತ್ರಾರ್ಜಿವಾಗಿ ಎಷ್ಟು ಆಸ್ತಿ ಬಂದಿದೆ ಎಂದರೆ ಸಾಕ್ಷಿ 13 ಎಕರೆ ಬಂದಿದೆ ಎಂದಿದ್ದಾರೆ. ದಾವಾ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗಳನ್ನು ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿ ಸಾಕಷ್ಟು ಆಸ್ತಿ ಖರೀದಿ ಮಾಡಿದ್ದೇನೆ ಎಂದಿದ್ದಾರೆ. ಯಾವ ಯಾವ ಊರಿನಲ್ಲಿ ಎಷ್ಟು ಆಸ್ತಿ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ಸೇಡಂ ಬಿಟ್ಟು ಹೊರಗೆ ದಾವಾ ಆಸ್ತಿ ಒಂದನ್ನೆ ಖರೀದಿ ಮಾಡಿದ್ದೇನೆ ಎಂದಿದ್ದಾರೆ. ಸೇಡಂನಿಂದ ನಿಡಗುಂದಾ ಗ್ರಾಮಕ್ಕೆ ಸುಮಾರು 25 ಕಿ.ಮೀ ಅಂತರ ಇದೆ. ನಿಡಗುಂದಾ ಗ್ರಾಮದಲ್ಲಿ ನನಗೆ ಹೊಲಮನೆ ಇರುವುದಿಲ್ಲ.

ಪ್ರತಿವಾದಿ ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನನ್ನ ಮನೆಗೆ ಬಂದು ಹೊಲ ಮಾರಾಟ ಮಾಡಿದ್ದರಿಂದ ಪರಿಚಯ ಇದೆ ಎಂದಿದ್ದಾರೆ. ಪ್ರತಿವಾದಿ ವಿಧವೆ ಎಂದರೆ ಸರಿ. ಪ್ರತಿವಾದಿ ಮನೆಯಲ್ಲಿ ಯಾರು ಗಂಡು ಮಕ್ಕಳು ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಅಳಿಯ ಆಕೆಯ ಒಬ್ಬಳನ್ನೆ ಕರೆದುಕೊಂಡು ಬಂದಿದ್ದಾರೆ. ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ದಾವಾ ಆಸ್ತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದಿದ್ದಾರೆ. ನಾನು ದಾವಾ ಆಸ್ತಿಯನ್ನು ನೋಡದೆ ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿ ನನ್ನ ಅಳಿಯ ಪ್ರತಿವಾದಿಯ ಕೇಸನ್ನು ನಾನೇ ನಡೆಸುತ್ತಿದ್ದೇನೆ ಆಕೆಗೆ ಒಳ್ಳೆಯದು ಆಗುತ್ತದೆ ಎಂದು ತೆಗೆದುಕೊಳ್ಳಿ ಎಂದು ಹೇಳಿದ್ದರಿಂದ ತೆಗೆದುಕೊಂಡಿದ್ದೇನೆ ಎಂದಿದ್ದಾರೆ. ಕ್ರಯದ ಕರಾರು

ಪತ್ರವನ್ನು ನಾನು ಓದಿ ನೋಡಿದ್ದೇನೆ. ಕ್ರಯದ ಕರಾರು ಪತ್ರದಲ್ಲಿ ಜಿಲ್ಲಾಧಿಕಾರಿ ಕಛೇರಿಯಲ್ಲಿ ಕೇಸು ನಡೆದಿದೆ ಮತ್ತು ಪ್ರತಿವಾದಿಗೆ ಅವಶ್ಯಕತೆ ಇದೆ ಎಂದು ಬರೆದಿಲ್ಲ ಎಂದರೆ ಸರಿ. ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಎಷ್ಟು ದಿನ ಮೊದಲು ಪ್ರತಿವಾದಿ ಬಂದಿದ್ದರು ಎಂದರೆ ಸಾಕ್ಷಿ ಎರಡು ದಿನಗಳ ಮೊದಲು ಬಂದಿದ್ದರು ಎಂದಿದ್ದಾರೆ. ಮೊದಲ ಬಾರಿಗೆ ಪ್ರತಿವಾದಿ ಬಂದಿದ್ದಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಪ್ರತಿವಾದಿ ಮತ್ತು ನಮ್ಮ ಅಳಿಯ ಬಂದಿದ್ದರು ಎಂದಿದ್ದಾರೆ. ವಾದ ಪತ್ರದಲ್ಲಿರುವ ಸಹಿ ನನ್ನದು ಆಗಿರುತ್ತದೆ. ನಿಪಿ-1(ಇ) ಸಹಿ ನನ್ನದೆ ಆಗಿರುತ್ತದೆ. ಸೇಡಂನಲ್ಲಿ ಶಿವಶಂಕರೆಪ್ಪ ತಂದೆ ಸಿದ್ರಾಮಪ್ಪ ತಳ್ಳಳ್ಳಿ ನಾನು ಒಬ್ಬರೆ ಎಂದರೆ ಸರಿ. ಪ್ರತಿವಾದಿ ಹೊಲವನ್ನು ಎಷ್ಟು ಬೆಲೆಗೆ ಮಾರಾಟ ಮಾಡುವುದಾಗಿ ತಿಳಿಸಿದರು ನೀವು ಎಷ್ಟು ಹಣಕ್ಕೆ ಒಪ್ಪಿದ್ದೀರಿ ಎಂದರೆ ಸಾಕ್ಷಿ ಆಕೆ ಮಾರಾಟ ಮಾಡುವುದಾಗಿ ಹೇಳಿದ್ದರಿಂದ ಪ್ರಸ್ತುತ ಹೊಲ ಎಕರೆಗೆ 36 ರಿಂದ 37 ಸಾವಿರಕ್ಕೆ ಹೋಗುತ್ತದೆ ಎಂದು ಹೇಳಿದ್ದರಿಂದ 5 ಎಕರೆ 23 ಗುಂಟೆ ಜಮೀನಿಗೆ ಒಟ್ಟು 2.00 ಲಕ್ಷ ಮಾತುಕತೆ ಆಗಿದೆ ಎಂದಿದ್ದಾರೆ. ಮಾತುಕತೆ ಆದ ದಿನ ಮುಂಗಡವಾಗಿ ಹಣ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹಣ ಕೊಟ್ಟಿಲ್ಲ ಎಂದಿದ್ದಾರೆ. ಸಾಮಾನ್ಯವಾಗಿ 20,000-00 ಸಾವಿರಕ್ಕಿಂತ ಹೆಚ್ಚಿಗೆ ವ್ಯವಹಾರ ಮಾಡಿದರೆ ಚೆಕ್‌ನ ಮುಖಾಂತರ ಮಾಡಬೇಕು ಎಂದರೆ ನಾನು ಬ್ಯಾಂಕಿಗೆ ಹೋಗಿಲ್ಲದೆ ಇರುವುದರಿಂದ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದಿದ್ದಾರೆ. ಯಾವ ವರ್ಷ ಬ್ಯಾಂಕ್ ಖಾತೆಯನ್ನು ತೆಗೆದಿದ್ದೀರಿ ಎಂದರೆ ಸಾಕ್ಷಿ ಸುಮಾರು 20 ವರ್ಷಗಳ ಕೆಳಗೆ ತೆಗೆದಿದ್ದೇನೆ ಎಂದಿದ್ದಾರೆ. ಕ್ರಯದ ಕರಾರು ಪತ್ರ ಆಗುವ ಸಮಯದಲ್ಲಿ ನನ್ನ ಬ್ಯಾಂಕ್ ಇತ್ತು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದಿದ್ದಾರೆ. ಮನೆಯಲ್ಲಿ ಯಾವಾಗಲೂ 1.00 ಲಕ್ಷ ಹಣ ಇತ್ತೆ ಎಂದರೆ ಸಾಕ್ಷಿ ನನ್ನ ಬಳಿ ಯಾವಾಗಲೂ ತುರ್ತು ಸಂದರ್ಭಗಳಿಗಾಗಿ 5 ರಿಂದ 10 ಲಕ್ಷ ಮನೆಯಲ್ಲಿ ಇಟ್ಟಿರುತ್ತೇನೆ ಎಂದಿದ್ದಾರೆ. ಮಾತುಕತೆ ಎಷ್ಟು ಸಮಯದವರೆಗೆ ಆಗಿದೆ ಎಂದರೆ ಸಾಕ್ಷಿ ಸುಮಾರು 20 ನಿಮಿಷಗಳ ವರೆಗೆ ಆಗಿದೆ ಎಂದಿದ್ದಾರೆ. ಯಾವ ಸಮಯದಲ್ಲಿ ಬಂದಿದ್ದರು ಎಂದರೆ ಸಾಕ್ಷಿ ಸಂಜೆ ಸಮಯದಲ್ಲಿ ಬಂದಿದ್ದರು ಎಂದಿದ್ದಾರೆ. ನನ್ನ ಅಳಿಯ ಸೇಡಂನಲ್ಲೆ ಇರುತ್ತಾರೆ ಎಂದರೆ ಸರಿ.

ಕ್ರಯದ ಕರಾರು ಪತ್ರ ಮಾಡುವ ಸಮಯದಲ್ಲಿ ನಿಮ್ಮ ಅಳಿಯ ಬಂದಿದ್ದರೆ ಎಂದರೆ ಸಾಕ್ಷಿ ಅವರು ಬಂದಿರಲಿಲ್ಲ ಎಂದಿದ್ದಾರೆ. ನನಗೆ ಯಾವ ಚಕ್ಕುಬಂದಿಯ ಸ್ವತ್ತನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿ ಪೂರ್ವ ದಿಕ್ಕಿಗೆ ಆದಂತೆ ಕೊಡುತ್ತೇನೆ ಎಂದು ಹೇಳಿದ್ದಾರೆ ಎಂದಿದ್ದಾರೆ. ಕ್ರಯದ ಕರಾರು ಪತ್ರದಲ್ಲಿ ಚಕ್ಕುಬಂದಿ ತೋರಿಸುವುದಿಲ್ಲ ಆದರೆ ವಾದ ಪತ್ರದಲ್ಲಿ ಕ್ರಯದ ಕರಾರಿಗೆ ತದ್ವಿರುದ್ಧವಾಗಿ ತೋರಿಸಿದ್ದೇನೆ ಎಂದರೆ ಸಾಕ್ಷಿ ನಾನು ಹೇಳಿದಂತೆ ವಕೀಲರು ಬರೆದಿದ್ದಾರೆ ಎಂದಿದ್ದಾರೆ. ಮಾರಾಟ ಒಪ್ಪಂದ ಪತ್ರದಲ್ಲಿ

ಚಕ್ಕುಬಂದಿ ಬರೆದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಸೂರ್ಯದಿಕ್ಕಿನ ಕಡೆಗೆ ಎಂದು ಬರೆದಿದೆ ಎಂದಿದ್ದಾರೆ. ವಾದ ಪತ್ರದಲ್ಲಿ ಸ್ವತ್ತಿನ ನಾಲ್ಕು ದಿಕ್ಕುಗಳನ್ನು ತೋರಿಸಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಖಾನ್‌ಸಾಬ್ ರವರ ಹೊಲ ಇದೆ ಎಂದು ಬರೆದಿದೆ ಎಂದರೆ ಸಾಕ್ಷಿ ಕರಾರು ಪತ್ರ ಆದ ನಂತರ ಹೊಲಕ್ಕೆ ಹೋಗಿ ನೋಡಿದಾಗ ಅವರ ಹೊಲ ಇದೆ ಎಂದು ಗುರುತಾಗಿದೆ ಎಂದಿದ್ದಾರೆ.

ಪ್ರತಿವಾದಿಗೆ ಸುಮಾರು 40 ಎಕರೆ ಹೊಲ ಇದ್ದು ಆರ್ಥಿಕವಾಗಿ ಸಬಲಳಾಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ತನಗೆ ಇರುವ 40 ರಿಂದ 50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಯಾರಿಗೂ ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ಬರೆದುಕೊಟ್ಟಿದ್ದಾರೆ ಎಂದಿದ್ದಾರೆ. ನಿಡಗುಂದಾ ಗ್ರಾಮದಲ್ಲಿ ಬಾಚೆಟ್ಟಿ ಕುಟುಂಬ ಒಳ್ಳೆಯ ಮನೆತನ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಹಣ ಕೊಡುವ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಪ್ರತಿವಾದಿಯ ಜೊತೆಗೆ ಚಿಂಚೋಳಿಯ ರಾಜು ಎಂಬುವವರು ಇದ್ದರು, ನನ್ನ ಪರವಾಗಿ ಶಿವಕುಮಾರ ತಂದೆ ಶಂಕರಾವ ಚಿಂಚೋಳಿ ಮತ್ತು ವಕೀಲರಾದ ಮಾಣಿಕರಾವ್‌ರವರು ಇದ್ದರು ಎಂದಿದ್ದಾರೆ. ಶಿವಕುಮಾರರವರು ಜೀವಂತ ಇದ್ದಾರೆ. ಹಣವನ್ನು ಎಲ್ಲಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನ್ಯಾಯಾಲಯದ ಕಂಪೌಂಡ್ ಬಳಿ ಕೊಟ್ಟಿದ್ದೇನೆ ಎಂದಿದ್ದಾರೆ. ಯಾವ ಮುಖಬೆಲೆಯ ನೋಟುಗಳನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿ 500-00 ಮುಖ ಬೆಲೆಯ ಎರಡು ಕಟ್ಟುಗಳ್ಳುಳ ಒಟ್ಟು 1.00 ಲಕ್ಷ ಕೊಟ್ಟಿದ್ದೇನೆ ಎಂದಿದ್ದಾರೆ. ಹಣ ಕೊಟ್ಟಾಗ ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ ಬೆಳಿಗ್ಗೆ 11.00 ಗಂಟೆ ಆಗಿತ್ತು ಎಂದಿದ್ದಾರೆ. ಕ್ರಯದ ಕರಾರು ಪತ್ರ ನೊಂದಣಿ ಆದಾಗ ಎಷ್ಟು ಸಮಯ ಆಗಿತ್ತು ಎಂದರೆ ಸಾಕ್ಷಿ 3 ರಿಂದ 4 ಗಂಟೆ ಸಮಯ ಆಗಿತ್ತು ಎಂದಿದ್ದಾರೆ. ನೊಂದಣಿ ಸಮಯದಲ್ಲಿ ಮಾಣಿಕರಾವ್ ವಕೀಲರು ಬಂದಿದ್ದರು ಎಂದಿದ್ದಾರೆ. ಕರಾರು ಪತ್ರ ಆದ ಎಷ್ಟು ದಿನಗಳ ನಂತರ ಹೊಲವನ್ನು ನೋಡಿದ್ದೀರಿ ಎಂದರೆ ಸಾಕ್ಷಿ ಕರಾರು ಪತ್ರ ನೋಂದಣಿ ಮಾಡಿಕೊಂಡು ಹೋಗುವಾಗ ನೋಡಿಕೊಂಡು ಹೋಗಿದ್ದೇನೆ ಎಂದಿದ್ದಾರೆ. ಹೊಲದ ಚಕ್ಕುಬಂದಿಯನ್ನು ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಕೇಳಿಲ್ಲ, ಹೊಲ ಕ್ರಯ ಪತ್ರ ಮಾಡಿಕೊಡುವ ಸಮಯದಲ್ಲಿ ಕೇಳಬಹುದು ಎಂದು ಕೇಳಿರುವುದಿಲ್ಲ ಎಂದಿದ್ದಾರೆ. ಪ್ರತಿವಾದಿಗೆ ಓದಲು ಬರೆಯಲು ಬರುವುದಿಲ್ಲ ಕೇವಲ ಸಹಿ ಮಾಡುತ್ತಾಳೆ ಎಂದರೆ ಸರಿ. ಕ್ರಯದ ಕರಾರು ಪತ್ರ ಆದ ದಿನದಿಂದ ದಾಖಲೆ ನನ್ನ ಬಳಿ ಇದೆ ಎಂದರೆ ಸರಿ. ನನ್ನ ಮಾವನವರು ಸಹ ವಕೀಲರು ಎಂದರೆ ಸರಿ.

ಪ್ರತಿವಾದಿಗೆ ಹೊಲ ನೋಂದಾಯಿಸಿ ಕೊಡುವಂತೆ ಎಂದಾದರೂ ಲಿಖಿತವಾಗಿ ಕೇಳಿದ್ದೀರಾ ಎಂದರೆ ಸಾಕ್ಷಿ ನಾನು ಶಿವರಾಜರವರಿಗೆ ಕೇಳಿದ್ದೇನೆ ಅವರು ಇನ್ನೂ ಕೇಸು ನಡೆದಿದೆ ನಾನು ಮಾಡಿಸಿಕೊಡುತ್ತೇನೆ

ಎಂದು ಹೇಳಿದ್ದರಿಂದ ಕೇಳಿಲ್ಲ ಎಂದಿದ್ದಾರೆ. ಶಿವರಾಜರವರಿಗೆ ಎಷ್ಟು ಬಾರಿ ಕೇಳಿದ್ದೀರಿ ಕೊನೆಯದಾಗಿ ಯಾವಾಗ ಕೇಳಿದ್ದೀರಿ ಎಂದರೆ ಸಾಕ್ಷಿ ಪ್ರತಿ 6 ತಿಂಗಳಿಗೆ ಕೇಳಿದ್ದೇನೆ ಸುಮಾರು 30 ಬಾರಿ ಕೇಳಿದ್ದೇನೆ ಕೊನೆಯದಾಗಿ 2016 ರಲ್ಲಿ ಕೇಳಿ ಅನುಮಾನ ಬಂದಿದ್ದರಿಂದ ದಾಖಲೆ ತೆಗೆಸಿ ನೋಡಿದ್ದರಿಂದ ಶಿವರಾಜ ತನ್ನ ಅತ್ತೆ ಹೆಸರಿನಲ್ಲಿ 06 ಎಕರೆ ಮತ್ತು ತನ್ನ ಹೆಂಡತಿ ಅಣ್ಣನ ಹೆಸರಿನಲ್ಲಿ 02 ಎಕರೆ ಮಾಡಿಸಿಕೊಂಡಿದ್ದರಿಂದ ಅನುಮಾನ ಬಂದು ಕೇಸು ದಾಖಲಿಸಿದ್ದೇನೆ ಎಂದಿದ್ದಾರೆ. ನಾನು ತೋರಿಸಿರುವ ಚಕ್ಕುಬಂದಿ ಸ್ವತ್ತು ಈಗಾಗಲೆ ಮಾರಾಟ ಆಗಿದೆ ಎಂದರೆ ಸಾಕ್ಷಿ ನನಗೆ ಮಾರಾಟ ಒಪ್ಪಂದ ಪತ್ರ ಮಾಡಿದ್ದರಿಂದ ಹೇಗೆ ಮಾರಾಟ ಮಾಡುತ್ತಾರೆ ಎಂದಿದ್ದಾರೆ. ಪ್ರತಿವಾದಿಗೆ ಗೊತ್ತಾಗದ ರೀತಿಯಲ್ಲಿ ನಾನೆ ಸರ್ವೆ ಮಾಡಿಸಲು ಹಣ ತುಂಬಿರುತ್ತೇನೆ ಎಂದರೆ ಸರಿಯಲ್ಲ, ಅದರ ಪ್ರಕಾರ ದಿನಾಂಕಃ 21-08-2010 ರಂದು ಸರ್ವೆ ಮಾಡಿದ್ದು ಸಾಕ್ಷಿದಾರರಾಗಿ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಸರ್ವೆ ಮಾಡಿದ ದಾಖಲೆ ದಿನಾಂಕಃ 09-01-2011 ರ ವರೆಗೆ ಚಲಾವಣೆಯಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ, 05 ಎಕರೆ 13 ಗುಂಟೆ ಪೈಕಿ 04 ಗುಂಟೆ ಫೋಟ್ ಖರಾಬು ಇದ್ದು ಉಳಿಕೆ 05 ಎಕರೆ 09 ಗುಂಟೆ ಜಮೀನನ್ನು ಪ್ರತಿವಾದಿಗೆ ಗೊತ್ತಾಗದೆ ಸರ್ವೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ, ಪ್ರತಿವಾದಿಗೆ ಗೊತ್ತಾಗದ ರೀತಿಯಲ್ಲಿ ಆಕೆಯ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ, ಸರ್ವೆ ಆಗಿರುವ ವಿಚಾರ ನನಗೆ 2011 ರಲ್ಲೆ ಗೊತ್ತಾಗಿದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೆ. ಸರಿ ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಚಿಂಚೋಳಿ**